JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ತುರಗನೂರು ಲಿಂಗೇಗೌಡರ 'ಪಾಂಡುವಿಜಯ' ನಾಟಕ ಒಂದು ವಿಶ್ಲೇಷಣೆ

**ಡಾ.ಜಗದೀಶ ಟಿ.ಎಲ್**

ಸಹ ಪ್ರಾಧ್ಯಾಪಕ, ಸರ್ಕಾರಿ ಮಹಿಳಾ ಕಾಲೇಜು,ಹುಣಸೂರು

*ಭಾರತದ ಎರಡು ಮಹಾಕಾವ್ಯಗಳಲ್ಲಿ ಮಹಾಭಾರತ ಕೃತಿ ಪ್ರಾಚೀನ ಕಾಲಘಟ್ಟದಿಂದ ನಡೆದುಕೊಂಡು ಬರುತ್ತಿರುವಂತಹ ಲೌಕಿಕ ಕಥೆಯನ್ನು ಒಳಗೊಂಡಿರುವ ಮಹಾಕೃತಿ. ಇದನ್ನು ವ್ಯಾಸ ಮಹರ್ಷಿಗಳು ಸಂಸ್ಕೃತದಲ್ಲಿ ಬರೆದಿದ್ದಾರೆ. ಅದನ್ನು ಕನ್ನಡದಲ್ಲಿ ಪಂಪ ರನ್ನ ಮತ್ತು ಕುಮಾರವ್ಯಾಸರು ತಮ್ಮ ತಮ್ಮ ಪಾಂಡಿತ್ಯಕ್ಕೆ ತಕ್ಕಂತೆ ರಚಿಸಿರುವುದನ್ನು ಗಮನಿಸಬಹುದು. ಇದಲ್ಲದೆ ಮಹಾಭಾರತದ ಕಥೆಯು ಸರಳ ಭಾಷೆಯಲ್ಲಿ ಜನಪದ ಸಾಹಿತ್ಯದಲ್ಲಿ ಜನಜನಿತವಾಗಿರುವುದು ವಿಶೇಷ .ಮಾತ್ರವಲ್ಲ ಮಹಾಭಾರತದ ಬೇರೆ ಬೇರೆ ಭಾಗಗಳನ್ನು ಆಧರಿಸಿ ರಚನೆಗೊಂಡಿರುವುದು ಈ ಕಥೆಯ ಔನತ್ಯ ಮತ್ತು ವಿಸ್ತಾರತೆಗೆ ಸಾಕ್ಷಿ ಎನಿಸಿದೆ. ಇದೇ ರೀತಿಯಲ್ಲಿ ಮಹಾಭಾರತದ ಕಾವ್ಯದ ಬಹಳಷ್ಟು ಭಾಗಗಳನ್ನು ರಂಗ ಪ್ರದರ್ಶನಕ್ಕೆ ಅಣಿಗೊಳಿಸಿರುವ ಬಹಳಷ್ಟು ನಿದರ್ಶನಗಳು ಕಾಣಸಿಗುತ್ತವೆ. ಬಿಡಿ ಬಿಡಿ ನಾಟಕವನ್ನಾಗಿ ಪ್ರದರ್ಶಿಸುವ ಮುಖೇನ ರಂಗಕಲೆಗೆ ಮಹತ್ವದ ಕೊಡುಗೆ ನೀಡಿರುವುದಲ್ಲದೆ, ಇದರಿಂದ ಸಾಂಸ್ಕೃತಿಕವಾಗಿ ಹಳ್ಳಿಗಳುಶ್ರೀಮಂತವಾಗಿರಲು ಪೂರಕ ವಾತಾವರಣವನ್ನು ಸೃಜಿಸಲು ಸಹಾಯಕವಾಗುತ್ತವೆ. ಹೀಗೆ ರಂಗಭೂಮಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರಿಂದ ವ್ಯಕ್ತಿತ್ವ ವಿಕಾಸಗೊಂಡು ತಮ್ಮ ಸುತ್ತಲಿನ ಸಮಾಜದ ಸುರಕ್ಷತೆಗೆ ಅಣಿಗೊಳಿಸುವುದು ಕಥೆಯ ಮೂಲ ಉದ್ದೇಶವೆನಿಸುತ್ತದೆ.*

*ಈ ನಿಟ್ಟಿನಲ್ಲಿ ತುರಗನೂರು ಲಿಂಗೇಗೌಡರು ಒಬ್ಬ ಕಲಾವಿದನಾಗಿ ,ರಂಗ ನಿರ್ದೇಶಕರಾಗಿ, ಹಾರ್ಮೋನಿಯಂ ವಾದಕರಾಗಿ ಮಹಾಭಾರತದ ಸಂಗತಿಗಳನ್ನು ಆಧರಿಸಿ ಹತ್ತು ಹಲವು ನಾಟಕಗಳನ್ನು ನೀಡಿರುವುದು ಗಮನಾರ್ಹ. ಕುರುಕ್ಷೇತ್ರ, ಅಭಿಮಾನಧನಂ ಸುಯೋಧನಂ ,ಧರ್ಮ ರಾಜ್ಯ ಸ್ಥಾಪನೆ ,ಹೆಸರಿನ ನಾಟಕಗಳನ್ನು ನಿರ್ದೇಶಿಸಿ ಪ್ರಸ್ತುತ ವಿರಾಟ ಪರ್ವ ದ ಭಾಗವೊಂದನ್ನು ಆಯ್ಕೆ ಮಾಡಿಕೊಳ್ಳುವ ಮುಖೇನ ಪಾತ್ರಗಳಿಗೆ ಜೀವ ತುಂಬುವ ಕೆಲಸ ಮಾಡಿದ್ದು,ಅವರ ಕಥಾ ಪ್ರೌಢಿಮೆಗೆ ಸಾಕ್ಷಿ ಎನಿಸಿದೆ. ನಾಟಕವು ಸಹಜವಾಗಿ ಗಣೇಶ ಸ್ತುತಿಯೊಂದಿಗೆ ಆರಂಭವಾಗುವ ಕ್ರಮವನ್ನು ಪಾಂಡು ವಿಜಯ ನಾಟಕದಲ್ಲಿ ಅನುಸರಿಸಲಾಗಿದೆ. ಗಜಮುಖನೇ ಗಣಪತಿಯೇ ಎಂದು ಹೇಳುತ್ತಾ,ಶ್ರೀ ಗಣನಾಥ ತ್ರಿಜಗ ವಿಖ್ಯಾತ ಯೋಗಿಜ ಮಾನಸ ಭೋಗ ವಿಸಾರದ, ಎಂದು ಸಂಗೀತ ಸ್ವರಮಾಧುರ್ಯದಿಂದ ಸೂತ್ರದ ನಾಟಕದ ಉದ್ದೇಶವನ್ನು ಪ್ರಸ್ತುತಪಡಿಸಿರುವುದು ನಾಟಕಕಾರರ ಪ್ರತಿಭಾ ಸಂಪನ್ನತೆಯ ಪ್ರತಿಕವೆನಿಸುತ್ತದೆ.*

*ದುರ್ಯೋಧನನ ದರ್ಬಾರ್ ಅಂಕದೊಂದಿಗೆ ನಾಟಕದಲ್ಲಿ ಪಾತ್ರಗಳು ಪ್ರವೇಶ ಪಡೆಯುತ್ತವೆ. ದುರ್ಯೋಧನನು ಸಹಜವಾದ ಹಠ ಸ್ವಭಾವದಿಂದಲೇ ಆರ್ಭಟಿಸುವ ಬಗ ವಿಶೇಷ ವಿನಿಸುತ್ತದೆ.*

*"ಆರು ಸಮರು ನನಗೆ ಈ ಧರೆಯೊಳಾಗಾರು ಸಮರೂ ಎನಗೆ ಬೋರಿಪರಾಕ್ರಮ ಸೈರಿಸಲರಿಯದೆ, ಆರು ಸಮರು". ಎಂದು ಆ ಆರ್ಭಟ ಮಾಡುವ ಖಳನಾಯಕನ ಆರ್ಭಟ ಓದುಗರನ್ನು ಹಿಡಿದಿಡುತ್ತದೆ.*

*ಸಭೆಯಲ್ಲಿ ದುರ್ಯೋಧನ, ದುಶ್ಯಾಸನನ ಕಾರಣ ವಿದುರ ಶಕುನಿ ಮತ್ತು ಧೃತರಾಷ್ಟ್ರರಾ ದಿಯಾಗಿ ಎಲ್ಲರೂ ನೆರೆದಿರುವುದು. ಆ ಸಂದರ್ಭದಲ್ಲಿ ಶಕುನಿಯ ಇಚ್ಛೆಯಂತೆ ದುರ್ಯೋಧನನಿಗೆ ಅರ್ಧ ಮಾಡಿಸುವ ಕುತಂತ್ರದಿಂದ ಇಡೀ ರಾಜ್ಯವೇ ನಮ್ಮದಾಗಬೇಕು ಎನ್ನುವ ಆಲೋಚನೆಗೆ ಸರ್ವರೂ ಸಹಮತ ವ್ಯಕ್ತಪಡಿಸಿ ತೀರ್ಮಾನಿಸಲಾಗುತ್ತದೆ.ಇದು ಎಲ್ಲರೂ ಮುಂದಿನ ಆಘಾತಕಾರಿ ಘಟನೆಗಳಿಗೆ ನಾಂದಿಯಾಗುವ ಕ್ಷಣಗಳಿಗೆ ಸಾಕ್ಷಿಯಾಗುತ್ತಾರೆ. ಧರ್ಮ ನಂದನ ಮತ್ತು ಅವನ ಸಹೋದರರು ಸಂತೋಷವಾಗಿರುವಾಗಲೇ ದುರ್ಯೋಧನನ ಪರವಾಗಿ ಬಂದ ವಿದುರನು ತನ್ನ ರಾಜನ ಆಜ್ಞೆಯನ್ನು ಪ್ರಸ್ತಾಪಿಸುತ್ತಾನೆ. ಅದರಂತೆ. ಧರ್ಮಜನು ಕ್ಷತ್ರಿಯ ಧರ್ಮದ ಪಾಲನೆ ಮಾಡುವ ನಿಟ್ಟಿನಲ್ಲಿ ದ್ಯೂತದ ವಿಚಾರವನ್ನು ಎತ್ತಿ ದುರ್ಯೋಧನನ ಜೊತೆ ಪಗಡೆಯಾಡಲು ನಿರ್ಧರಿಸುವ ಬಗೆಯನ್ನು,ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಸಭೆಯಲ್ಲಿ ದುರ್ಯೋಧನ, ದುಶ್ಯಾಸನ ,ವಿದುರ,ಶಕುನಿ ಮತ್ತು ಧೃತರಾಷ್ಟ್ರಾದಿಯಾಗಿ ಎಲ್ಲರೂ ನೆರೆದಿರುವರು. ಆ ಸಂದರ್ಭದಲ್ಲಿ ಶಕುನಿಯ ಇಚ್ಛೆಯಂತೆ ದುರ್ಯೋಧನನಿಗೆ ಅರ್ಧ ಮಾಡಿಸುವ ಕುತಂತ್ರವಿದೆ. ಇಡೀ ರಾಜ್ಯವೇ ನಮ್ಮದಾಗಬೇಕು ಎನ್ನುವ ಆಲೋಚನೆಗೆ ಸರ್ವರೂ ನಿರ್ಧರಿಸಿ ತೀರ್ಮಾನಿಸಲಾಗುತ್ತದೆ.ಈ ಹಿನ್ನಲೆಯಲ್ಲಿ ಮುಂದಣ ಅಘಾತಕಾರಿ ಘಟನೆಗಳಿಗೆ ನಾಂದಿಯಾಗುವ ಕ್ಷಣಗಳಿಗೆ ಸಾಕ್ಷಿಯಾಗುತ್ತಾರೆ.*

*ಧರ್ಮನಂದನ ಅದರಲ್ಲೂ ಕೃಷ್ಣ ಮತ್ತು ರುಕ್ಮಿಣಿಯರ ಸಂವಾದವನ್ನು ರಮಣೀಯವಾಗಿ ತರುವುದರಲ್ಲಿ ರಚನಕಾರರ ಪ್ರತಿಭೆ ಜ್ವಲಿಸಿರುವುದನ್ನು ಕಾಣಬಹುದಾಗಿದೆ. ಪಗಡೆ ಆಟದಲ್ಲಿ ಸೋತ ಧರ್ಮರಾಯನು ರಾಜ್ಯ ಸರ್ವ ಸ್ವವನ್ನು ಕಳೆದುಕೊಳ್ಳುವ ಕಪಟಿಗಳ ಕುತಂತ್ರವನ್ನು ಕಟ್ಟಿಕೊಟ್ಟಿರುವುದು ವಿಶೇಷ. ಈ ದ್ಯೂತದ ಕಾರಣದಿಂದಪಾಂಚಾಲಿಯಾದ ದ್ರೌಪದಿಯನ್ನು ಕಳೆದುಕೊಂಡು ಅಪಮಾನಕ್ಕೆ ಒಳಗಾಗುತ್ತಾರೆ. ಆ ಸನ್ನಿವೇಶವನ್ನು ಭೀಮನ ಮಾತುಗಳಲ್ಲಿ ಹೇಳಿಸುವ ರೀತಿಯನ್ನು ಕೃತಿಕಾರರು ವೈಶಿಷ್ಟ ಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. " ಮದಾಂಧರವರ ಕುರುಕುಲವನ್ನು*
*ಬರದಿ ಶಿರವ ತರಿಯುವೆ ವಿಜಯಿಗಳನ್ನು ಹಿಂಡತೀಗ ಪರಿಯಗೈವೆ ಲಕ್ಷಣಾ"*

*ಈ ಮಾತುಗಳಲ್ಲಿ ಭೀಮನ ಅಂತರ್ಯದ ಜ್ವಾಲೆಯು ಪ್ರಜ್ವಲಿಸುವ ಸಂಗತಿಯನ್ನು ಧ್ವನಿ ಪೂರ್ಣವಾಗಿ ಹಿಡಿದಿಟ್ಟಿದ್ದಾರೆ. ನಾನು ನನ್ನದು ಎನ್ನುವ ಅಹಂಕಾರ ತುಂಬಿರುವ ನಾಶವೇ ನನ್ನ ಗುರಿ ಎನ್ನುವ ಮುಖೇನ ಭೂಭಾರವನ್ನು ಕಡಿತಗೊಳಿಸುವುದು ಕೃಷ್ಣನ ಮಾಯೆಯೋ ಎಂದೆನಿಸುತ್ತದೆ. ದ್ರೌಪದಿಯಂತೂ ತನ್ನ ವಸ್ತ್ರಾಪಹರಣ ಮಾಡುವ ದುಶ್ಯಾಸನನ ವರ್ತನೆಯನ್ನು ಕಟುವಾಗಿ ನಿಂದಿಸುತ್ತಾಳೆ.*

"ಸರಿಯೇನಿದೋ ಈ ದುರ್ನಡತೆಯು

ಶೂರ ಪಾಂಡವರು ಶೂನ್ಯರಾಗಿಹರು

ಆರುವಿಲ್ಲ ಎನಗೆ ಕಾಪಾಡು ದೇವ! "

ಎಂದು ಹೇಳುವ ಮುಖೇನ ಭಗವತ್ಭಕ್ತಳ ಮೊರೆಯನ್ನು. ಕೇಳಬೇಕೆನ್ನುವ ಬಗೆಯನ್ನು ವಿಶಿಷ್ಟ ರೀತಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಕೇಳಬೇಕೆನ್ನುವ. ಈ ಸಂದರ್ಭದಲ್ಲಿ ಭೀಮನ ರೋಷಾವೇಶದ ಮಾತುಗಳು ನಿಷ್ಫಲವೆನಿಸುತ್ತವೆ. ಭೀಮನು ತನ್ನ ಅಣ್ಣನಾದ ಧರ್ಮರಾಯನನನ್ನು ಕುರಿತು ಹೇಳುವ ಮಾತು ಅಗ್ರಜ ನೋಡು ಪಾಂಚಾಲಿ ಅವಸ್ಥೆಯನ್ನು ಈ ಮತಾಂದನಾದ ದುಶ್ಯಾಸನನ ಗರ್ವವು ಮಿತಿಮೀರಿ ಇರುವುದು. ನಾವುಗಳು ಬದುಕಿದ್ದೂ ವ್ಯರ್ಥವಲ್ಲವೇ. ಈ ತುಂಬಿದ ಸಭೆಯಲ್ಲಿ ವೀರ ಪತ್ನಿ ಪಾಂಚಾಲಿಗೆ ಅಪಮಾನವೇ. ನಾನಿದನ್ನು ಸಹಿಸಲಾರೆ ಈ ದುಷ್ಟರನ್ನು ಈಗಲೇ ಸಂಹರಿಸಿಬಿಡುವೆನು ಎಂದು ಗದಯೆತ್ತಿದಾಗ. ಸಹೋದರರು ಅವನನ್ನು ಸಮಾಧಾನಿಸುವ ದೃಶ್ಯ ನೋಡುಗರ ಮನಸ್ಸನ್ನು ಒಂದು ಕ್ಷಣ ಕದಡುವಂತೆ ಲೇಖಕರು ಚಿತ್ರಿಸುತ್ತಾರೆ.

ಸಭೆಯಲ್ಲಿ ಉಪಸ್ಥಿತರಿರುವ ಗಾಂಧಾರಿಯ ಮನಸನ್ನು ಆಘಾತಗೊಳಿಸುವುದು ನಾಟಕಕಾರನ ಸ್ತ್ರೀ ಪರವಾದ ನಿಲುವನ್ನು ತಡೆದಂತಿದೆ. ಮಾತ್ರವಲ್ಲ. ಸ್ತ್ರೀ ಸಂವೇದನೆಯನ್ನು. ಲೇಖಕರಲ್ಲಿ ಗುರುತಿಸಬಹುದಾಗಿದೆ. ಗಾಂಧಾರಿಯು ದುರ್ಯೋಧನನನ್ನು ಕಟುವಾಗಿ ಮಾತನಾಡಿಸಿ ನಿನ್ನ ಈ ದುರ್ನಡತೆಯು ಮುಂದಿನ ಅನಾಹುತಕ್ಕೆ ನಾಂದಿಯಾಗುತ್ತದೆ. ಆದ್ದರಿಂದ ನಿನ್ನ ನಾಶವಾಗಬಹುದು ಎನ್ನುವ ಆಕೆಯ ಮಾತುಗಳು ಮುಂದಾಗುವ ಘೋರ ಘಟನೆಯನ್ನು ನೆನಪಿಸುತ್ತಿದೆ. ನಾಟಕದಲ್ಲಿ ಕೃಷ್ಣನ ದ್ರೌಪದಿಯ ಆ ವಸ್ತ್ರಾಪರಣದ ಸಂದರ್ಭದಲ್ಲಿ ಅಕ್ಷಯ ವಸ್ತ್ರದಾನ ಮಾಡುವ ಸಂಗತಿಯನ್ನು ಮಾರ್ಮಿಕವಾಗಿ. ಚಿತ್ರಿಸಲಾಗಿದೆ. ಈ ಸನ್ನಿವೇಶದಿಂದ ಕುಪಿತಳಾದ ದ್ರೌಪದಿಯು , ದುಶ್ಯಾಸನನನ್ನು ಶಪಿಸುವುದನ್ನು ಧೃತರಾಷ್ಟ್ರ ಮತ್ತು ಗಾಂಧಾರಿಯು ತಡೆದು ಅವಳಿಗೆ ವರಗಳನ್ನು ನೀಡುವ ಸನ್ನಿವೇಶವು ಮನನೀಯವಾಗಿದೆ.

ದ್ರೌಪದಿಯ ಅಪೇಕ್ಷೆ ಮೇರೆಗೆ ಪತಿಗಳು ಮತ್ತು ತನ್ನನ್ನು ಸ್ವತಂತ್ರವಾಗಿಸುವಲ್ಲಿ ಯಶಸ್ವಿಯಾದರೂ, ದುರ್ಯೋಧನ ಮತ್ತು ಶಕುನಿಯ ಕುತಂತ್ರದ ಪರಿಣಾಮವಾಗಿ ಅರಣ್ಯ ವಾಸವು ಖಚಿತವಾಗುತ್ತದೆ. ಅರಣ್ಯ ವಾಸದಲ್ಲಿ ದುರ್ಯೋಧನನು, ಪಾಂಡವರ ಜೀವನ ಕ್ರಮವನ್ನು ಅಪಹಾಸ್ಯ ಮಾಡುವ ಉದ್ದೇಶದಿಂದ ಹೋಗಿ ,ತಾನೇ ಗಂಧರ್ವನಲ್ಲಿ ಸೆರೆಯಾಗುವುದು ಆತನ. ಉದ್ಧಟತನಕ್ಕೆ ಸಾಕ್ಷಿ ಅನಿಸುತ್ತದೆ. ಗಂಧರ್ವನ ಸೆರೆಯಿಂದ ದುರ್ಯೋಧನ ನನ್ನು ಬಿಡಿಸಿಕೊಂಡು ಬರುವ ಲ್ಲಿ ವೀರಾಧಿ ವೀರರಿಗೂ ಅಸಾಧ್ಯವಾದಾಗ ಭಾನುಮತಿಯ ಕೋರಿಕೆಯ ಮೇರೆಗೆ ಅರ್ಜುನನು ಅಣ್ಣನ ಮಾತನ್ನು ಪಾಲಿಸುತ್ತಾನೆ. ಅದರಂತೆ ದುರ್ಯೋಧನನಿಗೆ ಕಟ್ಟಿದ ಎಡಮುರಿಯ ಕಟ್ಟನ್ನು ಬಿಡಿಸಲಾರದ ಭಾನುಮತಿಯ ಅಸಹಾಯಕತೆಯ ಪ್ರಸಂಗ ಧ್ವನಿ ಪೂರ್ಣವಾಗಿ ಮೂಡಿ ಬಂದಿದೆ. ಅಲ್ಲದೆ ಕಾಮ್ಯಕವನದಲ್ಲಿ ಯಕ್ಷಪ್ರಶ್ನೆಯ ಪ್ರಸಂಗವು, ಧರ್ಮರಾಯನ ಬುದ್ಧಿಮತ್ತೆ ಹಾಗೂ ತಾಳ್ಮೆಯನ್ನು ಪ್ರತಿನಿಧಿಸುವಂತಿದೆ. ಹನ್ನೆರಡು ವರ್ಷ ವನವಾಸವನ್ನು ಪೂರ್ಣಗೊಳಿಸಿ ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಿ ಮತ್ಸ್ಯರಾಜ ವಿರಾಟನ ಆಸ್ಥಾನದಲ್ಲಿ ಕಳೆಯಲು

ನಿರ್ಧರಿಸಿ ವಿವಿಧ ವೇಷ ಧರಿಸಿ ಅರಮನೆಗೆ ಪ್ರವೇಶಿಸುವುದನ್ನು ಮನಮೋಹಕವಾಗಿ ಲೇಖಕರು ನಿರೂಪಿಸಿದ್ದಾರೆ. ಅದರಲ್ಲೂ ಕೀಚಕನ ವಧೆಯನ್ನು ಭೀಮನು ಮಾಡುವ ಸಂಗತಿ ವಿಶಿಷ್ಟವಾಗಿ ಮೂಡಿ ಬಂದಿದೆ. ನಾಟಕಕಾರರ ಹಾಸ್ಯ ಪ್ರಜ್ಞೆಯು ಉತ್ತರನ ದರ್ಬಾರ್ ನಲ್ಲಿ ನಡೆಯುವ ಪ್ರಸಂಗವು ಮುಂದಿನ ಪಾಂಡವರ ಕುರುಕ್ಷೇತ್ರ ಯುದ್ಧಕ್ಕೆ ದಿಕ್ಸೂಚಿ ಅನಿಸುತ್ತದೆ. ಎಲ್ಲಾ ಅಂಶಗಳ ಗಮನಹರಿತ ದುರ್ಯೋಧನನ ದೃಷ್ಟಿ ವಿರಾಟನ ಆಸ್ಥಾನದತ್ತ ಹೊರಳುತ್ತದೆ. ಈ ಹಿನ್ನೆಲೆಯಲ್ಲಿ ಅವರ ಗೋವುಗಳನ್ನು ಅಪಹರಿಸುವ ಕಾರ್ಯಕ್ಕೆ ಮುಂದಾಗುವ ದುರ್ಯೋಧನನ ಸೈನ್ಯಕ್ಕೆರುಚಿ ತೋರಿಸುವ ಸನ್ನಿವೇಶವಂತೂ ಕಣ್ಣಿಗೆ ಹಬ್ಬವನ್ನುಂಟು ಮಾಡುವಂತಿದೆ. ಮಾತ್ರವಲ್ಲ ಬೃಹನ್ನಳೆಯ ಕಾರಣದಿಂದ ಯುದ್ಧವನ್ನು ಜಯಿಸುವ ಉತ್ತರನ ಶೌರ್ಯಕ್ಕೆ ಎಲ್ಲೆಯೇ ಇಲ್ಲವೆಂಬಂತೆ ಇಡೀ ವಿರಾಟ ನಗರ ಕಂಗೊಳಿಸುತ್ತದೆ.ಅಲ್ಲಿ ಉತ್ತರನ ಗುಣಗಾನದೊಂದಿಗೆ ಅವನ ಶೌರ್ಯದ ಬಗೆಗಿನ ಮಾತುಗಳು ಓದುಗರನ್ನು ಹಿಡಿದಿಡುವಂತೆ ನಾಟಕಕಾರರು ನಿರೂಪಿಸಿದ್ದಾರೆ.

ಒಟ್ಟಾರೆ ತುರಗನೂರು ಲಿಂಗೇಗೌಡರು ಕೃಷಿಕ ಕುಟುಂಬದಲ್ಲಿ ಜನಿಸಿದವರಾದರೂ, ಪೌರಾಣಿಕ ಹಿನ್ನೆಲೆಯಿರುವ 'ಪಾಂಡು ವಿಜಯ' ಎನ್ನುವ ನಾಟಕದಲ್ಲಿ ಮಹಾಭಾರತದ ಕಥೆಯನ್ನು ಅಳವಡಿಸಿಕೊಂಡಿದ್ದರೂ, ಕಥೆಯನ್ನು ಇಡೀ ರಾತ್ರಿಯಲ್ಲಿ ಅಭಿನಯಿಸುವಷ್ಟರ ಮಟ್ಟಿಗೆ ಅದನ್ನು ಕಡಿತಗೊಳಿಸಲಾಗಿದೆ.ಆದರೂ ಯಾವುದೇ ನಾಟಕದ ಓಗಕ್ಕೆ ಕುಂದುಂಟಾಗದಂತೆ ರಚಿಸಿರುವುದು ನಾಟಕಕಾರರ ಕಲಾಭಿರುಚಿಯನ್ನ ಪ್ರದರ್ಶಿಸುತ್ತದೆ.

ಆಕರ ಕೃತಿಗಳು.

1. ಪಾಂಡುವಿಜಯ,ತುರಗನೂರು ಲಿಂಗೇಗೌಡ
2. ಕುಮಾರವ್ಯಾಸ ಭಾರತ ಕುಮಾರವ್ಯಾಸ